ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 84 (52)

2) ಸದಸ್ಯರ ಹೆಸರು : ಶ್ರೀ ಆರ್ ಪ್ರಸನ್ನಕುಮಾರ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

3) ಉತ್ತರಿಸುವ ದಿನಾಂಕ : 21-09-2020

4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಚಿರತೆ, ಹುಲಿ, ಆನೆ ಮಾನವರ ಮೇಲೆ ದಾಳಿ ಮಾಡಿರುವ ಪ್ರಕರಣಗಳೆಷ್ಟು; ಇದರಲ್ಲಿ ಎಷ್ಟು ಜನ ಮೃತಪಟ್ಟಿರುತ್ತಾರೆ; ಮೃತ ಪಟ್ಟಿರುವವರಿಗೆ ಪರಿಹಾರವಾಗಿ ಎಷ್ಟು ಹಣವನ್ನು ನೀಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)	ರಾಜ್ಯದಲ್ಲಿ ಚಿರತೆ, ಹುಲಿ, ಆನೆ ಒಳಗೊಂಡಂತೆ ಇತರೆ ವನ್ಯಪ್ರಾಣಿಗಳ ದಾಳಿಯಿಂದ ಗಾಯಗೊಂಡ ಹಾಗೂ ಮಾನವ ಪ್ರಾಣ ಹಾನಿ ಪ್ರಕರಣಗಳ ಜಿಲ್ಲಾವಾರು / ವಿಭಾಗವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.
ಆ)	ಇತ್ತೀಚಿನ ದಿನಗಳಲ್ಲಿ ವನ್ಯಜೀವಿಗಳು ಮಾನವನ ಮೇಲೆ ದಾಳಿ ಮಾಡುವುದು ಮತ್ತು ಹಳ್ಳಿಗಳಲ್ಲಿ ಕಾಣಿಸಿಕೊಳ್ಳಲು ಕಾರಣಗಳೇನು;	ಇತ್ತೀಚಿನ ವರ್ಷಗಳಲ್ಲಿ ಅರಣ್ಯದ ಅಂಚಿನಲ್ಲಿ ಬರುವ ಗ್ರಾಮಗಳಲ್ಲಿನ ಭೂಪ್ರದೇಶದ ಬಳಕೆಯಲ್ಲಿನ ಬದಲಾವಣೆ ಹಾಗೂ ವಾಣಿಜ್ಯ ತೋಟದ ಬೆಳೆಗಳಿಗಾಗಿ ಬಳಸಿಕೊಂಡು ಬರುತ್ತಿರುವುದರಿಂದ ವನ್ಯಜೀವಿಗಳು/ಕಾಡಾನೆಗಳು ವಾಸಿಸುವ ನೈಸರ್ಗಿಕ ಆವಾಸಸ್ಥಾನವು ಧಕ್ಕೆಗೊಳಗಾಗುತ್ತಿದೆ. ಇದರಿಂದಾಗಿ ಅರಣ್ಯ ಪ್ರದೇಶಗಳ ಅಂಚಿನಲ್ಲಿರುವ ಖಾಸಗಿ ಜಮೀನುಗಳಲ್ಲಿ ಕಾಡಾನೆಗಳನ್ನು ಆಕರ್ಷಿಸುವ ಬೆಳೆಗಳಾದ ಭತ್ತ, ತೆಂಗು, ಬಾಳೆ, ಹಲಸು ಮತ್ತು ವಾಣಿಜ್ಯ ಬೆಳೆಗಳಿಗೆ ಆಕರ್ಷಣೆಗೊಂಡು ದಾಳಿ ಮಾಡುತ್ತಿರುವುದು ಕಂಡು ಬಂದಿದೆ.
ಇ)	ಈ ರೀತಿ ಪ್ರಕರಣಗಳನ್ನು ತಡೆಯಲು ಸರ್ಕಾರಕೈಗೊಂಡ ಕ್ರಮಗಳೇನು? (ಜಿಲ್ಲಾವಾರು ಮಾಹಿತಿ ನೀಡುವುದು)	ವನ್ಯಜೀವಿಗಳು ಕಾಡಿನಿಂದ ಹೊರಗೆ ಬರದಂತೆ ಇಲಾಖಾ ವತಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. 1. ರಾಜ್ಯದಲ್ಲಿರುವ ವನ್ಯಜೀವಿಗಳಿಗೆ ಸಂಪೂರ್ಣ ರಕ್ಷಣೆ ನೀಡುವ ಸಲುವಾಗಿ ರಾಷ್ಟ್ರೀಯ ಉದ್ಯಾನವನ, ಅಭಯಾರಣ್ಯ, ಹುಲಿ ಮೀಸಲು ಅರಣ್ಯ, ಸಂರಕ್ಷಿತ ಮೀಸಲು ಅರಣ್ಯಗಳನ್ನು ಘೋಷಿಸಲಾಗಿರುತ್ತದೆ. 2. ಅರಣ್ಯ ಪ್ರದೇಶದಲ್ಲಿ ಹುಲ್ಲುಗಾವಲು ಸಂರಕ್ಷಣೆ ಹಾಗೂ ಅಭಿವೃದ್ಧಿಗೊಳಿಸಲು 2019-20ನೇ ಸಾಲಿನಿಂದ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಅರಣ್ಯ ಪ್ರದೇಶಗಳಲ್ಲಿ ದಟ್ಟವಾಗಿ ಬೆಳೆದ ಲಂಟಾನ ಮತ್ತು ಯುಪಟೋರಿಯಂ ಕಳೆಗಳನ್ನು ಹಂತಹಂತವಾಗಿ ಕಿತ್ತು ಸ್ವಚ್ಛಗೊಳಿಸಿ ಅರಣ್ಯಕ್ಕೆ ಪೂರಕವಾದ ಹುಲ್ಲು ಬೆಳೆಯಲು ಅವಕಾಶ ಮಾಡಲಾಗಿದೆ. 3. ವನ್ಯಪ್ರಾಣಿಗಳಿಗಾಗಿ ಅರಣ್ಯ ಪ್ರದೇಶಗಳ ಒಳಗೆ ನೀರಿನ ಲಭ್ಯತೆ ಹೆಚ್ಚಿಸಲು ರಕ್ಷಿತಾರಣ್ಯಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಪುನಶ್ಚೇತನಗೊಳಿಸಿ ವನ್ಯಪ್ರಾಣಿಗಳ ಆವಾಸಸ್ಥಾನವನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. ಇದರಿಂದ ಕಾಡಾನೆ ಹಾಗೂ ಇತರೆ ವನ್ಯಪ್ರಾಣಿಗಳು ಕಾಡಿನಿಂದ ಹೊರಗೆ ಬಾರದಂತೆ ತಡೆಯಲಾಗುತ್ತಿದೆ.

ಕ್ರ ಸಂ	ಪ್ರಶ್ನೆ	ಉತ್ತರ
		4. ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಅರಣ್ಯದಂಚಿನಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ/ನಿರ್ವಹಣೆ, ಆನೆತಡೆ ಕಂದಕ ನಿರ್ಮಾಣ/ನಿರ್ವಹಣೆ ಮಾಡಲಾಗಿದ್ದು ಮತ್ತು ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. 5. ಕಳ್ಳಬೇಟೆ ತಡೆ ಶಿಬಿರಗಳಿಗೆ ಹಾಗೂ Rapid Response Teams (RRT) ಗಳನ್ನು, ಅಂದರೆ ಕಾಡಾನೆ ಹಿಮ್ಮೆಟ್ಟಿಸುವ ತಂಡಗಳನ್ನು ರಚಿಸಿ ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ ಹಾಗೂ Wireless Networking ಮೂಲಕ ಮಾಹಿತಿ ಸಂವಹನ ಮಾಡಲಾಗುತ್ತಿದೆ. 6. ಕಾಡಾನೆಗಳ ಮಾಹಿತಿಯನ್ನು ಸಂಗ್ರಹಿಸಲು 24 ಗಂಟೆ ಕಾರ್ಯ ನಿರ್ವಹಿಸುವ ಮಾಹಿತಿ ಕೇಂದ್ರ ಸ್ಥಾಪಿಸಲಾಗಿದೆ. 7. ಕಾಡಾನೆ ಗುಂಪಿನಲ್ಲಿರುವ ವಯಸ್ಕ ಹೆಣ್ಣಾನೆಯನ್ನು ಗುರುತಿಸಿ, ಅದಕ್ಕೆ ರೇಡಿಯೋ ಕಾಲರ್ ಅಳವಡಿಸಿ ಆನೆಗಳ ಚಲನವಲನಗಳ ಬಗ್ಗೆ ಎಸ್.ಎಂ.ಎಸ್. ಹಾಗೂ ವಾಟ್ಸಾಪ್ ಮೂಲಕ ಜನರಿಗೆ ಮಾಹಿತಿಯನ್ನು ನೀಡಿ ಮಾನವ ಪ್ರಾಣಹಾನಿ ಹಾಗೂ ಮಾನವ ಗಾಯ ತಪ್ಪಿಸಲು ಕ್ರಮ ವಹಿಸಲಾಗುತ್ತಿದೆ. 8. ಸಾರ್ವಜನಿಕರಿಗೆ ಉಪಟಳ ನೀಡುತ್ತಿರುವ ಪುಂಡಾನೆಗಳನ್ನು ಗುರುತಿಸಿ, ಸೆರೆಹಿಡಿದು ಆಗಿಂದಾಗ್ಗೆ ಆನೆ ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ. 9. ಇತ್ತೀಚಿನ ದಿನಗಳಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಹಾನಿ ಪ್ರಕರಣಗಳಿಗೆ ಇ-ತಂತ್ರಾಂಶದ ಮೂಲಕ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದ್ದು, ಆದ್ಯತೆ ಮೇರೆಗೆ ನಿಯಮಾನುಸಾರ ಪರಿಶೀಲಿಸಿ, ನೇರವಾಗಿ ಸಂತ್ರಸ್ತರ ಖಾತೆಗೆ ಶೀಘ್ರವಾಗಿ ಪಾವತಿಸುವ ಪ್ರಕ್ರಿಯೆಯನ್ನು ಇ-ಪರಿಹಾರ ತಂತ್ರಾಂಶದ ಮೂಲಕ ನಿರ್ವಹಿಸಲಾಗುತ್ತಿದೆ.

ಸಂಖ್ಯೆ: ಅಪಜೀ 143 ಎಫ್‌ಡಬ್ಲ್ಯೂಎಲ್ 2020

(ಆನಂದ್ ಸಿಂಗ್)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 84 (52) ರ ಅನುಬಂಧ

ಕ್ರ ಸಂ	ವಿಭಾಗ	ಚಿರತೆ, ಹುಲಿ, ಆನೆ ಒಳಗೊಂಡಂತೆ ಇತರೆ ವನ್ಯಪ್ರಾಣಿಗಳು ಮಾನವರ ಮೇಲೆ ಮಾಡಿರುವ ದಾಳಿ ಪ್ರಕರಣಗಳು			ಚಿರತೆ, ಹುಲಿ, ಆನೆ ದಾಳಿಯಿಂದ ಉಂಟಾದ ಮಾನವ ಹಾನಿ ಪ್ರಕರಣ ಹಾಗೂ ಪಾವತಿಸಲಾದ ದಯಾತ್ಮಕ ಧನದ ವಿವರ (ರೂ.ಲಕ್ಷಗಳಲ್ಲಿ)					
		2018-19	2019-20	2020-21 (ಆಗಸ್ಟ್ ಅಂತ್ಯದವರೆಗೆ)	2018-19		2019-20		2020-21 (ಆಗಸ್ಟ್ ಅಂತ್ಯದವರೆಗೆ)	
		ಪ್ರಕರಣ	ಪ್ರಕರಣ	ಪ್ರಕರಣ	ಪ್ರಕರಣ	ಪಾವತಿಸಲಾದ ಮೊತ್ತ	ಪ್ರಕರಣ	ಪಾವತಿ ಸಲಾದ ಮೊತ್ತ	ಪ್ರಕರಣ	ಪಾವತಿ ಸಲಾದ ಮೊತ್ತ
1.	ರಾಮನಗರ	15	4	3	1 (ಆನೆ)	5.00	2 (ಆನೆ)	10.00	2 (ಚಿರತೆ)	15.00
2.	ಬೆಂಗಳೂರು ಗ್ರಾಮಾಂತರ	–	4	–	–	–	1 (ಆನೆ)	5.00	–	–
3.	ಬನ್ನೇರುಘಟ್ಟ ರಾ.ಉ	2	2	–	–	–	1 (ಆನೆ)	7.50	–	–
4.	ಕೋಲಾರ	3	6	1	1 (ಆನೆ)	5.00	4 (ಆನೆ)	30.00	1 (ಆನೆ)	7.50
5.	ಬೆಳಗಾವಿ	5	5	–	–	–	–	–	–	–
6.	ಬಾಗಲಕೋಟೆ	1	–	–	–	–	–	–	–	–
7.	ಬಿಜಾಪುರ	2	1	–	–	–	–	–	–	–
8.	ಗೋಕಾಕ್	7	–	–	–	–	–	–	–	–
9.	ಬಳ್ಳಾರಿ	6	7	–	3 (ಚಿರತೆ)	15.00	–	–	–	–
10.	ಚಿತ್ರದುರ್ಗ	10	–	–	–	–	–	–	–	–
11.	ದಾವಣಗೆರೆ	5	4	–	–	–	–	–	–	–
12.	ಕೊಪ್ಪಳ	2	–	7	–	–	–	–	–	–
13.	ಬಿ.ಆರ್.ಟಿ	8	8	–	3 (ಆನೆ)	–	1 (ಆನೆ)	–	–	–
14.	ಕಾವೇರಿ	8	1	–	1 (ಆನೆ)	5.00	1 (ಆನೆ)	5.00	–	–
15.	ಮಲೈ ಮಹದೇಶ್ವರ	3	7	4	1 (ಆನೆ)	5.00	4 (ಆನೆ)	20.00	1 (ಆನೆ)	7.50
16.	ಚಿಕ್ಕಮಗಳೂರು	10	4	–	2 (ಆನೆ)	10.00	2 (ಆನೆ)	10.00	–	–
17.	ಭದ್ರಾ	1	–	–	–	–	–	–	–	–
18.	ಕೊಪ್ಪ	1	2	1	–	–	–	–	–	–
19.	ಗದಗ	21	–	–	–	–	–	–	–	–
20.	ಹಾವೇರಿ	1	4	–	–	–	–	–	–	–
21.	ಬಂಡೀಪುರ	10	16	–	1 (ಆನೆ)	5.00	3 (ಆನೆ) 2 (ಹುಲಿ)	27.50	–	–
22.	ನಾಗರಹೊಳೆ	25	4	4	1 (ಆನೆ) (3 ಹುಲಿ)	20.00	–	–	(1 ಹುಲಿ)	7.5

23.	ಬೀದರ್	1	–	–	–	–	–	–	–	–
24.	ಕಲುಬರಗಿ	11	–	–	–	–	–	–	–	–
25.	ಯಾದಗಿರಿ	2	2	–	–	–	–	–	–	–
26.	ದಾಂಡೇಲಿ	1	1	1	–	–	–	–	–	–
27.	ಹಳಿಯಾಳ	1	2	1	–	–	–	–	–	–
28.	ಹೊನ್ನವಾರ	2	3	1	–	–	–	–	–	–
29.	ಯಲ್ಲಾಪುರ	8	1	–	–	–	–	–	–	–
30.	ಹಾಸನ	8	7	2	1 (ಆನೆ)	5.00	3 (ಆನೆ)	15.00	1 (ಆನೆ)	7.50
31.	ತುಮಕೂರು	24	33	9	–	–	1 (ಆನೆ) 4 (ಚಿರತೆ)	32.50	–	–
32.	ಮಡಿಕೇರಿ	4	6	2	–	–	2 (ಆನೆ)	12.50	2 (ಆನೆ)	15.00
33.	ವಿರಾಜಪೇಟೆ	8	8	1	–	–	1 (ಆನೆ)	5.00	1 (ಆನೆ)	7.50
34.	ಮಡಿಕೇರಿ ವಜೀ	3	2	–	–	–	1 (ಆನೆ)	5.00		
35.	ಕುಂದಾಪುರ	4	6	–	–	–	–	–	–	–
36.	ಮಂಗಳೂರು	1	1	–	–	–	–	–	–	–
37.	ಮಂಡ್ಯ	5	–	–	–	–	–	–	–	–
38.	ಹುಣಸೂರು	7	–	–	–	–	–	–	–	–
39.	ಮೈಸೂರು	9	8	1	–	–	2 (ಆನೆ)	12.50		
40.	ಭದ್ರಾವತಿ	7	1	1	–	–	–	–	–	–
41.	ಸಾಗರ	1	–	–	–	–	–	–	–	–
42.	ಶಿವಮೊಗ್ಗ	2	1	–	–	–	–	–	–	–
	ಒಟ್ಟು	**255**	**161**	**39**	**18**	**75.00**	**35**	**197.50**	**9**	**67.50**

- ವನ್ಯಪ್ರಾಣಿ ದಾಳಿಯಿಂದ ಉಂಟಾಗುವ ಮಾನವ–ಪ್ರಾಣ ಹಾನಿ ಪ್ರಕರಣಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಅಪಜೀ 143 ಎಫ್‌ಡಬ್ಲ್ಯೂಎಲ್ 2010, ದಿನಾಂಕ: 03.08.2011ರ ಪ್ರಕಾರ ರೂ.5.00 ಲಕ್ಷಗಳನ್ನು ಮೃತಪಟ್ಟ ವಾರಸುದಾರರಿಗೆ ಪಾವತಿಸಲಾಗಿರುತ್ತದೆ.
- ಪ್ರಸುತ ಸರ್ಕಾರದ ಆದೇಶ ಸಂಖ್ಯೆ: ಅಪಜೀ 66 ಎಫ್‌ಡಬ್ಲ್ಯೂಎಲ್ 2019, ದಿನಾಂಕ: 07.01.2020ರ ಪ್ರಕಾರ ವನ್ಯಪ್ರಾಣಿಗಳಿಂದ ಮೃತಪಟ್ಟಿರುವ ವ್ಯಕ್ತಿಯ ವಾರಸುದಾರರಿಗೆ ಪಾವತಿಸುತ್ತಿರುವ ದಯಾತ್ಮಕ ಧನವನ್ನು ರೂ.5,00,000/–ಗಳಿಂದ ರೂ.7,50,000/– ಗಳಿಗೆ ಹೆಚ್ಚಿಸಿ ಆದೇಶಿಸಲಾಗಿದೆ.
- ಅಲ್ಲದೇ ಸರ್ಕಾರಿ ಆದೇಶ ಸಂಖ್ಯೆ: ಅಪಜೀ 61 ಎಫ್‌ಎಪಿ 2018, ದಿನಾಂಕ: 16.10.2018 ರನ್ವಯ ಮೃತರ ಕುಟುಂಬದ ವಾರಸುದಾರರಿಗೆ 05 ವರ್ಷಗಳವರೆಗೆ ರೂ. 2,000/–ಗಳ ಮಾಸಾಶನವನ್ನು ಸಹ ನೀಡಲಾಗುತ್ತಿದೆ.